# ಜಪಾನ್ ಬಾರ್ಬಿ

■ ಪ್ರವೀಣ ಕುಲಕರ್ಣಿ



ಅಗಲವಾದ ಕಣ್ಣು ಮತ್ತು ಸೌಮ್ಯ ನಗುವಿನ ಲಿಕಾ ಚಾನ್ ಎಂದರೆ ಸಾಕು, ಜಪಾನಿಗರ ಪಾಲಿಗೆ ಒಬ್ಬ ಸೂಪರ್‌ಸ್ಟಾರ್. ಎಂತಹ ದೊಡ್ಡ ಸ್ಟಾರ್‌ಗೂ ಇಲ್ಲದಷ್ಟು ಅಭಿಮಾನಿಗಳ ಪಡೆ ಆಕೆಗಿದೆ. ಸ್ವೆಟರ್ ತೊಟ್ಟು, ಕಪ್ಪು ಶೂ ಧರಿಸಿ ನಿಂತ ಈಕೆಗೆ ಜಪಾನ್‌ನಲ್ಲಿ ಮನಸೋಲದವರೇ ಇಲ್ಲ. ಅಂದಹಾಗೆ, ಲಿಕಾ ಚಾನ್ ಹೆಸರಿನ ಈ ಬೊಂಬೆ ಹುಡುಗಿ 'ಜಪಾನ್ ಬಾರ್ಬಿ' (ಬಾರ್ಬಿ – ಅಮೆರಿಕನ್ ಕಂಪನಿ ರೂಪಿಸಿದ ಫ್ಯಾಷನ್ ಗೊಂಬೆ, ಜಗತ್ತಿನಾದ್ಯಂತ ಪ್ರಸಿದ್ಧ) ಎಂದೂ ಹೆಸರಾಗಿದ್ದಾಳೆ. ಆ ದೇಶದ ಸಾಮಾಜಿಕ ಜಾಲತಾಣದಲ್ಲಿ ಸಹ ಇವಳದೇ ಜಪ.

ಈ ಕೃತಕ ಹುಡುಗಿಯ ಅಭಿಮಾನಿಯೊಬ್ಬ ಅವಳ ವಿಡಿಯೊ ಮಾಡಿ, ತನ್ನ ಹತ್ತಾರು ಲಕ್ಷ ಇನ್‌ಸ್ಟಾಗ್ರಾಮ್ ಫಾಲೋವರ್‌ಗಳಿಗೆ ಕಳಿಸುತ್ತಾನೆ. ಈ ಪುಟ್ಟ ಹುಡುಗಿಗೆ ಬೇಕಾದ ಚಿಕಣಿ ಬಟ್ಟೆಗಳನ್ನು ಹಲವರು ಶ್ರಮವಹಿಸಿ ತಯಾರಿಸುತ್ತಾರೆ. ಹೊಸ ಹೊಸ ಫ್ಯಾಷನ್ ಸರಕುಗಳ ಮೂಲಕ ಅವಳನ್ನು ಅಲಂಕರಿಸಿ, ತೆಗೆದ ಫೋಟೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಮಹಾಪೂರದಂತೆ ಹರಿದುಬರುತ್ತವೆ. ಸಾವಿರಾರು ಜನರ ಕನಸು ನನಸಾಗಲು ಸಹ ಲಿಕಾ ಚಾನ್ ಕಾರಣವಾಗಿದ್ದಾಳೆ. ಹಾಗೆ ಕನಸು ಈಡೇರಿಸಿಕೊಂಡವರಲ್ಲಿ ಮಿನಾಮಿ ಮುರಯಮಾ ಸಹ ಒಬ್ಬರು. 'ನನಗೆ ಫ್ಯಾಷನ್ ಡಿಸೈನರ್ ಆಗಬೇಕೆಂಬ ಬಲವಾದ ಹಂಬಲವಿತ್ತು. ನನ್ನ ಆ ಕನಸು ಈಗ ನಿಜವಾಗಿದೆ. ಆದರೆ, ನಾನು ವಿನ್ಯಾಸಗೊಳಿಸುವ ಬಟ್ಟೆಗಳ ಗಾತ್ರ ಮಾತ್ರ ಲಿಕಾ ಚಾನ್‌ಗೆ ಸರಿಹೊಂದುವಂತೆ ಕಿರಿದಾಗಿದೆ' ಎಂದು ಅವರು ಹೇಳುತ್ತಾರೆ.

ಮಿನಾಮಿ ಅವರ ಬಳಿ ಒಟ್ಟಾರೆ 40 ಗೊಂಬೆಗಳಿವೆ. ಅವುಗಳಿಗೆ ಸಿದ್ಧಪಡಿಸಿದ ವಸ್ತ್ರಗಳು ಮಾತ್ರ ಸಾವಿರಕ್ಕೂ ಮಿಗಿಲಾಗಿವೆ. ವಸ್ತ್ರ ವಿನ್ಯಾಸಕ್ಕೆ ಸಂಬಂಧಿಸಿದಂತೆ ಯಾವುದೇ ಹೊಸ ಐಡಿಯಾ ಬಂದರೂ ಕೆಲವೇ ದಿನಗಳಲ್ಲಿ ಲಿಕಾ ಚಾನ್‌ಗೆ ಅಂತಹ ವಸ್ತ್ರ ಸಿದ್ಧವಾಗಿ ಬಿಡುತ್ತದೆ. ಮಿನಾಮಿ ಅವರು 'ಲಿಕಾ ಚಾನ್ಸ್ ರಿಯಲ್ ಲೈಫ್' ಎಂಬ ಚಾನೆಲ್ ಬೇರೆ ನಡೆಸುತ್ತಿದ್ದಾರೆ. ಈ ಹುಡುಗಿಯೇನೂ ಗ್ಲಾಮರ್ ಜೀವನ ನಡೆಸುವುದಿಲ್ಲ. ಬದಲಾಗಿ ಸಾಮಾನ್ಯ ಹುಡುಗಿಯಂತೆ ಅಸ್ತವ್ಯಸ್ತ ಕೋಣೆಯಲ್ಲಿಯೇ ಬದುಕು ಸಾಗಿಸುತ್ತಾಳೆ. ನಿತ್ಯಜೀವನದಲ್ಲಿ ಎಲ್ಲರಂತೆ ತಪ್ಪುಗಳನ್ನೂ ಮಾಡುತ್ತಾಳೆ. ಈ ಗೊಂಬೆ ಹುಡುಗಿ ಜನಿಸಿದ್ದು 1967ರಲ್ಲಿ. ಟಕಾರಾ ಟಾಮಿ ಎಂಬ ಕಂಪನಿ ಈ ಹುಡುಗಿಯ ಜನಕವಾಗಿದ್ದು, ಇಲ್ಲಿಯವರೆಗೆ ಅವಳ ಆರು ಕೋಟಿ ಪ್ರತಿಕೃತಿಗಳನ್ನು ಮಾರಾಟ ಮಾಡಿದೆ. ಜಪಾನಿನ ಮಕ್ಕಳ ಪಾಲಿಗೆ ಈಕೆ ಅತ್ಯಂತ ಪ್ರೀತಿಯ ಒಡನಾಡಿ ಆಗಿದ್ದಾಳೆ. ಹೀಗಾಗಿ ದೇಶದ ಉದ್ದಗಲಕ್ಕೆ ಎತ್ತ ಸಂಚರಿಸಿದರೂ ಅವಳು ಲಭ್ಯ. ಅವಳಿಲ್ಲದ ಊರೇ ಇಲ್ಲ ಎನ್ನುವಂತಹ ವಾತಾವರಣ ಜಪಾನ್‌ನಲ್ಲಿದೆ.

ಟಕಾರಾ ಟಾಮಿ ಕಂಪನಿಯ ವೆಬ್‌ಸೈಟ್‌ನಲ್ಲಿರುವ ಬಯಾಗ್ರಫಿಯಲ್ಲಿ ಲಿಕಾ ಚಾನ್, ಜಪಾನಿ ವಿನ್ಯಾಸಕರ್ತಿ ಅಮ್ಮ ಮತ್ತು ಫ್ರೆಂಚ್ ಸಂಗೀತಗಾರ ತಂದೆಯ ಹನ್ನೊಂದು ವರ್ಷದ ಮುದ್ದಿನ ಮಗಳು ಎಂದು ಬರೆಯಲಾಗಿದೆ. 22 ಸೆಂಟಿಮೀಟರ್ (8.5 ಇಂಚು) ಎತ್ತರದ ಈಕೆ, ಬಾರ್ಬಿಗಿಂತ ಚಿಕ್ಕವಳು. ಗ್ಲಾಮರ್ ಲುಕ್‌ನಲ್ಲೂ ಬಾರ್ಬಿಗಿಂತ ಹಿಂದೆ ಬಿದ್ದವಳು. ಆದರೆ, ಸೀದಾ, ಸಾದಾ ಹುಡುಗಿ. ಹೀಗಾಗಿಯೇ ಜಪಾನಿಗರ ಕಣ್ಮಣಿಯಾಗಿದ್ದಾಳೆ.

ಲಿಕಾ ಚಾನ್, ಬ್ಯಾಗ್ ಹೊತ್ತೊಯ್ಯಲು ಹೆಣಗಾಡುವ ದೃಶ್ಯಗಳು, ಪೈಜಾಮಾ ಹಾಕಿಕೊಂಡು ರಿಲ್ಯಾಕ್ಸ್ ಮೂಡ್‌ನಲ್ಲಿರುವ ಫೋಟೊಗಳು, ಬಗೆಬಗೆಯ ಭಕ್ಷ್ಯಗಳ ತಟ್ಟೆಯ ಮುಂದೆ ಮಂದಸ್ಮಿತವಾಗಿ ಕುಳಿತ ನೋಟಗಳು... ಹೌದು, ಸಾಮಾಜಿಕ ಜಾಲತಾಣಗಳಲ್ಲಿ ಅವಳ ಚಿತ್ರವಿಲ್ಲದ ಚಾಟ್‌ಗಳೇ ಇಲ್ಲ. ಎಷ್ಟೋ ಜನರಿಗೆ ಲಿಕಾ, ಒತ್ತಡ ನಿವಾರಣೆಗೆ ನೆರವಾಗುವ ವ್ಯಕ್ತಿಯಾಗಿಯೂ ಗೋಚರಿಸಿದ್ದಾಳೆ. ಕೋವಿಡ್ ಸಮಯ ಹಾಗೂ ನಂತರದ ಕಾಲಘಟ್ಟದಲ್ಲಿ ಏಕಾಂತದ ಬೇಸರ ಕಳೆಯುವ ಸಂಗಾತಿಯಾಗಿ ಈಕೆ ಜಪಾನ್‌ನ ಲಕ್ಷಾಂತರ ಜನರ ನೆರವಿಗೆ ಧಾವಿಸಿದ್ದಾಳೆ.

ಲಿಕಾ ಚಾನ್ ಎಷ್ಟೊಂದು ಜನಪ್ರಿಯಳಾಗಿದ್ದಾಳೆ, ಮಕ್ಕಳು ಮಾತ್ರವಲ್ಲದೆ ದೊಡ್ಡವರೂ ಅವಳನ್ನು ಎಷ್ಟೊಂದು ಪ್ರೀತಿಸುತ್ತಾರೆ ಎನ್ನುವುದರ ಅರಿವು ಟಕಾರಾ ಟಾಮಿ ಕಂಪನಿಗೆ ಇದೆ. ಹೀಗಾಗಿ ದೊಡ್ಡವರಿಗಾಗಿಯೇ ವಿಶೇಷ 'ಲಿಕಾ' ಸರಣಿಯನ್ನು ಅದು ಬಿಡುಗಡೆ ಮಾಡಿದೆ. ದೊಡ್ಡವರೂ ಈಗ ಗೊಂಬೆ ಹುಡುಗಿಯೊಂದಿಗೆ ಆಟ ಆಡುತ್ತಿದ್ದಾರೆ. ಹೀಗಾಗಿ ಲಿಕಾ 'ನ್ಯಾಷನಲ್ ಐಕಾನ್' ಆಗಿದ್ದಾಳೆ. ಜಗತ್ತಿನ ತುಂಬಾ ಆಕೆ ಗೊಂಬೆಗಳ ಐಕಾನ್ ಆಗಿ ಬೆಳೆಯಲಿದ್ದಾಳೆ ಎಂದು ಅಭಿಮಾನಿಗಳ ವರ್ಗ, ಅವಳ ಪರವಾಗಿ ಜೈಕಾರ ಹಾಕುತ್ತಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65